**Shikshan Sanshodhan** : Journal of Arts, Humanities and Social Sciences
Monthly, Peer-Reviewed, Refereed, Indexed Journal
Volume - 8, Issue - 10, October - 2025

ISSN(o): 2581-6241
Impact Factor: 9.134

DOIs:10.2018/SS/202510014 --:-- Research Paper / Article / Review

# ದಾಸ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆ:

ಡಾ.ಶಿವಕುಮಾರ್.ಜಿ.ಎನ್.

ಸಹಾಯಕ ಪ್ರಾಧ್ಯಾಪಕರು, ಆಚಾರ್ಯ ಬೆಂಗಳೂರು ಬಿ ಸ್ಕೂಲ್, ಬೆಂಗಳೂರು -೯೧

**ಜಡಿ,ಃಣಾಚಿಞಾಣಚಿಡಿರು@ಚಿಟಿಚಿಜಜಣಚಿ**

**ಅಮೂರ್ತ:** ಸಮಾಜದಲ್ಲಿ ಸಾಮಾಜಿಕ ಸಮಾನತೆಯ ಸಮಸ್ಯೆ ಇತ್ತೀಚಿನ ಸಮಸ್ಯೆಯಲ್ಲ.ಶತ ಶತಮಾನಗಳ ಕರಾಳ ಪಿಡುಗು. ಮೂಡನಂಬಿಕೆ, ಜಾತಿ , ವರ್ಗ-ವರ್ಣ, ಲಿಂಗತಾರತಮ್ಯ, ಅಸ್ಪಶ್ಯತೆ, ಬಡವ-ಬಲ್ಲಿದ ಹೀಗೆ ಹತ್ತಾರು ಅಂಶಗಳ ಹಿನ್ನೆಲೆಯಿಂದ ಜನ ಸಾಮಾನ್ಯರು ತತ್ತರಿಸಿ ಹೋಗಿದ್ದರು.ಇದನ್ನು ಮನಗಂಡ ಬುದ್ದಿಜೀವಿಗಳು ಹದಗೆಟ್ಟಿದ್ದ ವಾತಾವರಣವನ್ನು ಸುಚಿಗೊಳಸುವುದರ ಮೂಲಕ ಸಮಾನತೆಯ ಬೀಜಾಂಕುರಕ್ಕೆ ನಾಂದಿ ಹಾಡಿದರು. ಪ್ರಸ್ತುತ ಸಮಾಜದಲ್ಲಿ ರಾರಾಜಿಸುತ್ತಿರುವ ಬಹುತೇಕ ಎಲ್ಲಾ ಸಮಸ್ಯೆಗಳು ಹನ್ನೆರಡನೇ ಶತಮಾನದಲ್ಲಿಯೇ ಪಾರುಪತ್ಯವನ್ನು ಮೆರೆದಿದ್ದವು.ಅವುಗಳ ವಿರುದ್ಧ ಹೋರಾಡಿ ಸಮತಾ ಭಾವಕ್ಕೆ ಸಮಾಜವನ್ನು ಅಣಿಗೊಳಿಸಿದ್ದರು.ಆದರೆ ದುರಾದೃಷ್ಟವೋ ,ಜನರ ತಿಳುವಳಿಕೆ ಹೀನವೋ ಎಲ್ಲಾ ಕಂದಕಗಳು ವಚನಕಾರರ ತರುವಾಯ ಮುಂದುವರೆಯಲ್ಪಟ್ಟವು. ಹಾಗಾಗಿ ಮತ್ತೆ ಸಮಾಜವನ್ನು ಮರು ಸೃಷ್ಟಿಸುವ, ಸಮಾಜವನ್ನು ನಿರ್ಮಿಸುವ ಹೊಣೆಗಾರಿಕೆಯನ್ನು ಕೀರ್ತನಾಕಾರರು ಹೊತ್ತರು.

ಶಿವಶರಣರ ತತ್ವ ಸಿದ್ಧಾಂತಗಳನ್ನು ಆಧರಿಸಿ ಹದಿನಾರನೆಯ ಶತಮಾನದಲ್ಲಿ ಬೆಳಕಿಗೆ ಬಂದುದು ಕೀರ್ತನಾ ಸಾಹಿತ್ಯ. ಶ್ರೀ ವ್ಯಾಸರಾಯರಿಂದ ಅಂಬೆ ಕಾಲಿಟ್ಟ ಈ ಪ್ರಕಾರ ಕನಕದಾಸ, ಪುರಂದರದಾಸ, ಜಗನ್ನಾಥದಾಸರಂಥ ಮೇಧಾವಿಗಳಿಂದ ಹುಲುಸಾಗಿ ಬೆಳೆಯಿತು. ಹರಿಯ ಭಕ್ತರಾಗಿದ್ದ ಕೀರ್ತನಾಕಾರರು ದೈವ ಭಕ್ತಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟು ಜನಮಾನಸದಲ್ಲಿ ಭಕ್ತಿ ಭಾವವನ್ನು ಪುಟಿಸುವುದರ ಮೂಲಕ ಸಾಮಾಜಿಕ ಕಳಕಳಿಗೆ ಆಹ್ವಾನವಿತ್ತರು. ಜನರೊಟ್ಟಿಗೆ ರಕ್ತಗತವಾಗಿವಾಗಿದ್ದ ಜಾತಿ-ಮತ, ಲಿಂಗಭೇದ,ವರ್ಗತರತಮಗಳನ್ನು ತೊಡೆದು ಹಾಕಿ ಸಮಾನತೆಯ ತತ್ವವನ್ನು ಮರು ಸ್ಥಾಪಿಸಲು ಕಂಕಣ ಬದ್ಧರಾಗಿದ್ದರು.

ಪ್ರಮುಖ ಪದಗಳು: ಕೀರ್ತನೆಗಳ ಆಶಯ, ಸಾಮಾಜಿಕ ಸಮಾನತೆ, ಜಾತಿಯ ನಿರ್ಮೂಲನೆ, ಪುರಂದರ ದಾಸ, ಕನಕದಾಸ.

ದಾಸಶ್ರೇಷ್ಠರು, ವ್ಯಾಸರಾಯರ ಶಿಷ್ಯರು, ಆಗರ್ಭ ಶ್ರೀಮಂತರೂ ಆಗಿದ್ದ ಕನಕದಾಸರು ತಮ್ಮ ಸುತ್ತ ತಾಂಡವ ನೃತ್ಯವಾಡುತ್ತಿದ್ದ ರಾಜ -ಪ್ರಜೆ , ಶ್ರೀ ಮಂತ-ದರಿದ್ರ,ಮೇಲು-ಕೀಳು, ಬ್ರಾಹ್ಮಣ-ಶೂದ್ರ ಮೊದಲಾದ ಅಸಮಾನತೆಗಳನ್ನು ನೋಡಿ ಅದರಿಂದ ಬೇಸತ್ತು ಲೌಕಿಕ ಸಂಪತ್ತಿನಲ್ಲಿ ವೈರಾಗ್ಯ ತಾಳಿ, ಆತ್ಮಶ್ರೀಯನ್ನು ಪಡೆದು ಸಮಾಜ ಕಲ್ಯಾಣಕ್ಕಾಗಿ ತಮ್ಮನ್ನು ಮುಡಿಪಾಗಿರಿಸಿಕೊಂಡರು. ಭಾಗವತ ಮನೋಧರ್ಮವನ್ನು ಮೈಗೂಡಿಸಿಕೊಂಡ ಕನಕದಾಸರು ದಾಸರೆಲ್ಲರಿಗಿಂತ ತೀರ ವಿಭಿನ್ನವಾದ, ವಿಶಿಷ್ಟವಾದ, ಅದ್ವಿತೀಯ ದಾಸರೆಂಬ ಕೀರ್ತಿಗೆ ಭಾಜನರಾದರು. ತಮ್ಮ ಸುತ್ತಣ ಜಗತ್ತಿನಲ್ಲಿ ಸಾಧು-ಸಂತ, ಸಂನ್ಯಾಸಿ ದಾಸ ಜಂಗಮ ಮೊದಲಾದ ವೇಷಗಳ ಮುಖೇನ ನಡೆಯುತ್ತಿದ್ದ ಮೋಸ ವಂಚನೆ ದುಷ್ಟ ವ್ಯವಹಾರಗಳನ್ನು ಕಣ್ಣಾರೆ ಕಂಡು ಯಾರ ಹಂಗಿಗೆ ಒಳಗಾಗದೆ ನಿರ್ದಾಕ್ಷಿಣ್ಯವಾಗಿ ಖಂಡಿಸಿ, ಸಾಮಾಜಿಕ ಸಾಮರಸ್ಯವನ್ನು ಮೊಳಗಿಸಿದರು. ಅವರು

"ತೀರ್ಥವ ಪಡೆದವರೆಲ್ಲಾ ತಿರುನಾರಾಯಣನ ನಾಮಧಾರಿಗಳೆ ಜನ್ಮ
ಸಾರ್ಥಕ ವಿಲ್ಲದವರೆಲ್ಲ ಭಾಗವತರೆ
ಮೂಗ್ಹಿಡಿದು ನೀರೊಳಗೆ ಮುಳುಗಿ ಜಪತಪ ಮಾಡಿ
ಭಾಗವತ ಶಾಸ್ತ್ರಾದಿಗಳನೆಲ್ಲ ಓದಿ
ಭಾಗಿ ಪರಸತಿಯರನು ಬಯಸಿ ಕಣ್ಣಿಡುವಂಥ
ನೀತಿ ತಪ್ಪಿದರೆಲ್ಲ ದೇವ ಬ್ರಾಹ್ಮಣರೆ? 1

ಕೀರ್ತನೆಯಲ್ಲಿ ಬೂಟಾಟಿಕೆಯ ಸಾಧು-ಸಂತ, ಪುರೋಹಿತರು ಮಾಡುವ ಅನಾಚಾರವನ್ನು ವಿಡಂಬನೆ ಮಾಡುವ ರೀತಿ ವಿಶಿಷ್ಟವಾದುದು. ತನ್ನ ಬಳಿ ಬಂದ ಭಕ್ತರಿಗೆ ಕೈಯಲ್ಲಿ ತೀರ್ಥವನ್ನು ಕೊಟ್ಟ ಮಾತ್ರಕ್ಕೆ ದೈವಭಕ್ತರಾಗುವುದಿಲ್ಲ. ಬೆಳಗ್ಗೆ ಎದ್ದು ಮೂಗನ್ನು ಹಿಡಿದು ನೀರಿನಲ್ಲಿ ಮುಳುಗೇಳುತ ಜಪ-ತಪ ಮಂತ್ರಗಳನ್ನು ಪಠಿಸುತ್ತಾ ದೈವತ್ವದ ಸ್ತೋತ್ರಗಳನ್ನು ಓದಿ, ಭಕ್ತಿಭಾವದಿಂದ ದೇವಾಲಯಕ್ಕೆ ಬಂದ ಪರ ಸ್ತ್ರೀಯರನ್ನು ಕೆಟ್ಟ ದೃಷ್ಟಿಯಿಂದ ನೋಡುವ ನೀತಿ ಬಾಹಿರರನ್ನು ಪುರೋಹಿತರೆಂದು ಕರೆಯಲು ಹೇಗೆ ಸಾಧ್ಯ ಎಂದು ಡಾಂಭಾಚಾರಿಗಳ ಕಲ್ಮಶ ಮನಸ್ಥಿತಿಯನ್ನು ವಿಡಂಬಿಸಿದ್ದಾರೆ.

"ಸತ್ಯವಂತರ ಸಂಗವಿರಲು ತೀರ್ಥವ್ಯಾತಕೆ
ನಿತ್ಯ ಜ್ಞಾನಿಯಾದ ಮೇಲೆ ಚಿಂತೆಯಾತಕೆ
ತಾನು ಉಣ್ಣದೆ ಪರರಿಗಿಕ್ಕದ ಧನವಿದ್ಯಾತಕೆ
ಮಾನಹೀನವಾಗಿ ಬಾಳ್ವ ಮನುಜನೇತಕೆ
ಜ್ಞಾನ ವಿಲ್ಲದೆ ನೂರು ಕಾಲ ಬದುಕಲ್ಯಾತಕೆ
ಮಾನವೀಯ ತೊರೆದ ಮೇಲೆ ಭೋಗವ್ಯಾತಕೆ " 2

ನಾವು ಮಾಡುವ ಕೆಲಸ ಒಳ್ಳೆಯದಾಗಿದ್ದು, ಸಚ್ಚಾರಿತ್ರ್ಯ ಹೊಂದಿದವರ ಸಾನಿಧ್ಯದಲ್ಲಿದ್ದು ಉತ್ತಮ ಜೀವನ ಸಾಗಿಸಿದರೆ ದೇವಾಲಯಕ್ಕೆ ಹೋಗುವ ಅಗತ್ಯವಾಗಲಿ,ತೀರ್ಥವನ್ನು ಪಡೆಯುವ ಪ್ರಮೇಯವಾಗಲಿ ಬರುವುದಿಲ್ಲ. ಹಾಗಾಗಿ ಸರಿ-ತಪ್ಪುಗಳ ವಿಚಾರವಾಗಿ ವಿವೇಚನಾಯುಕ್ತ ನಿರ್ಣಯ ತೆಗೆದುಕೊಳ್ಳುವ ಜ್ಞಾನ ಕೌಶಲ್ಯವನ್ನು ವೃದ್ಧಿಸಿಕೊಂಡು, ತನ್ನಲ್ಲಿರುವ ಸಂಪತ್ತನ್ನು ಸೂಕ್ತವಾಗಿ ಬಳಸಿಕೊಂಡು ತನ್ನಿಂದಾಗುವಷ್ಟು ಸಂಕಷ್ಟದಲ್ಲಿ ಸಿಲುಕಿದವರಿಗೆ ಕೊಡುವುದೇ ನಿಜವಾದ ಮಾನವೀಯ ಮೌಲ್ಯ.ಇಂತಹ ಜ್ಞಾನವನ್ನು ಪಡೆದು ಕೊಳ್ಳದೆ, ಸ್ವಾರ್ಥ ದಾಹಕ್ಕೆ ಬಲಿಯಾಗಿ ಅಸಹ್ಯಕರ ಜೀವನವನ್ನು ಪ್ರಭಾವಿಸಿ, ತೋರ್ಪಡಿಕೆಯ ಭಕ್ತಿಯನ್ನು ಪ್ರದರ್ಶಿಸುವುದರಿಂದ ಭಕ್ತರಾಗಲು ಸಾಧ್ಯವಿಲ್ಲವೆಂದು ಮಾರ್ಮಿಕವಾಗಿ ನುಡಿದಿದ್ದಾರೆ. ಅಲ್ಲದೆ ಜನ ಹೊಟ್ಟೆ ತುಂಬಿಸಿಕೊಳ್ಳಲು ಮಾಡುವ ಅನಾಚಾರಗಳನ್ನು ಕುರಿತು ಲೇವಡಿ ಮಾಡಿದ್ದಾರೆ

"ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ತುತ್ತು ಹಿಟ್ಟಿಗಾಗಿ
ವೇದ ಶಾಸ್ತ್ರ ಪಂಚಾಂಗ ಓದಿಕೊಂಡು ಪರರಿಗೆ
ಬೋಧನೆಯ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ"

ಕೀರ್ತನೆಯಲ್ಲಿ 'ಉದರನಿಮಿತ್ತಂ ಬಹುಕೃತ ವೇಷಂ' ಎಂಬ ಮಾತಿಗನುಗುಣವಾಗಿ ಜೀವನವನ್ನು ಸಾಗಿಸಲು ಪ್ರತಿಯೊಬ್ಬರು ಒಂದೊಂದು ವೇಷ,ವೃತ್ತಿಯನ್ನು ಅವಲಂಬಿಸಿದ್ದಾರೆ.ನಾವು ಅಲಂಕರಿಸಿರುವ ವೃತ್ತಿ ಅಥವಾ ವೇಷಗಳು

ಗೌರವವನ್ನು ತಂದುಕೊಡುವ, ಸಮಾಜಕ್ಕೆ ಪೂರಕವಾಗಿರಬೇಕೆ ವಿನಃ ಹೊಟ್ಟೆ ಹೊರೆಯುವುದಕ್ಕೆ ಸೀಮಿತ ಪಡಿಸಿಕೊಳ್ಳಬಾರದು. ವೃತ್ತಿ ಯಾವುದೇ ಇರಲಿ ಮೋಸ, ವಂಚನೆ,ಕೊಲೆ,ಸುಲಿಗೆ ವಿಕೃತ ಭಾವನೆಗಳು ಸಾಮಾನ್ಯ ವಾಗಿರುವುದನ್ನು ಮನಗಂಡ ಕೀರ್ತನಕಾರರು ಖಂಡಿಸುತ್ತಾ ಸಮಾಜ ಒಪ್ಪಿತವಾದ ಮಾದರಿ ಜೀವನಕ್ಕೆ ಅಣಿಗೊಳಿಸುವರು.

ದಾಸ ಶ್ರೇಷ್ಠರೂ, ತಮ್ಮ ಗುರುವಿನಿಂದ "ದಾಸರೆಂದರೆ ಪುರಂದರದಾಸರಯ್ಯ" ಎಂಬ ಹೊಗಳಿಕೆಗೆ ಭಾಜನರಾಗಿದ್ದ ಪುರಂದರ ದಾಸರು ಸಂಗೀತಕ್ಕೆ ಭದ್ರ ತಳಹದಿಯನ್ನು ಹಾಕುವುದರ ಮೂಲಕ 'ಕರ್ನಾಟಕ ಸಂಗೀತ ಪಿತಾಮಹ' ರೆಂಬ ಬಿರುದಿಗೆ ಪಾತ್ರರಾದರು. ಇವರ ಕೀರ್ತನೆಗಳ ವ್ಯಾಪ್ತಿ ಸಂಗೀತಕ್ಕೆ ಮಾತ್ರ ಸೀಮಿತವಾಗದೆ ಸಮಾಜ ಜೀವನದ ಕಡೆಗೂ ಲೋಕಾನುಭವದ ದೃಷ್ಟಿ ಹರಡಿದೆ. ಅವರು ವಚನಕಾರರಂತೆ ಜನರಲ್ಲಿ ಕ್ರಾಂತಿಯನ್ನುಂಟು ಮಾಡದಿದ್ದರೂ ಮನುಷ್ಯರ ನಡೆ-ನುಡಿ, ಆಚಾರ - ವಿಚಾರ, ಓರೆ ಕೋರೆಗಳನ್ನು ಮುನ್ನೆಲೆಗೆ ತಂದು ಜೀವನ ನಿರ್ವಹಣೆಗೆ ಸಂಬಂಧಿಸಿದ ಸಲಹೆಗಳನ್ನು ನೀಡುತ್ತಾ ಸಾಮರಸ್ಯ ಭಾವವನ್ನು ಬಿತ್ತಿದರು. ಬದುಕಲ್ಲಿ ಪದೇಪದೆ ಕಾಡುವ ಅತೃಪ್ತಿಗೆ ಕಾರಣ ನಾವು ಇದ್ದುದ್ದರಲ್ಲಿಯೆ ಸುಖ ಕಾಣದಿರುವುದು.ಅಂತಹ ಸಂದರ್ಭದಲ್ಲಿ ಅತಿರೇಕದ ಅಸಮಾದಾನ , ಅತೃಪ್ತಿ ತಾಂಡವವಾಡುತ್ತಾ ಒಳ್ಳೆಯ ಭಾವನೆಗಳು ಕಡಿಮೆಯಾಗಿ ಅವುಗಳ ಸ್ಥಾನದಲ್ಲಿ ದುಷ್ಟ ಪ್ರವೃತ್ತಿ, ಅನ್ಯಾಯ ಅಕ್ರಮಗಳು ಮುನ್ನೆಲೆಗೆ ಬರುತ್ತವೆ.ಇದರ ಪ್ರಭಾವದಿಂದ ತಮ್ಮಿಂದ ನಡೆಯಬಾರದ ಅನಾಚಾರಗಳು ನಡೆಯುತ್ತವೆ.ಇವುಗಳನ್ನು ಸಮಚಿತ್ತದ ಆಲೋಚನೆಯಿಂದ ತಡೆಯಬಹುದು ಎಂದು ಸಮಾಜದ ಅಂಡುಡೊಂಕುಗಳನ್ನು ನಮ್ಮ ಮುಂದಿಡುತ್ತಾ ಅದಕ್ಕೆ ಸೂಕ್ತ ಆಲೋಚನೆಯ ಕೊರತೆ ನಾಗರಿಕ ಸಮಾಜವನ್ನು ಕಾಡುತ್ತಿರುವುದನ್ನು ಪ್ರಕಟಿಸಿದ್ದಾರೆ.ಅವರು ಬೂಟಾಟಿಕೆಯ ದೈವಭಕ್ತ ಸಾಧು-ಸಂತರ ಡಂಭಾಚಾರವನ್ನು ತೀಕ್ಷ್ಣವಾಗಿ ಟೀಕಿಸುವ ಪರಿ ವಿಶಿಷ್ಟ ವಾದುದು.

"ಉದರ ವೈರಾಗ್ಯವಿದು ನಮ್ಮ

ಪದುಮನಾಭನಲಿ ಲೇಶ ಭಕುತಿಯಿಲ್ಲ" 3

ಕೀರ್ತನೆಯಲ್ಲಿ ಜನ ಬಾಳ ಬಂಡಿಯನ್ನು ಹೂಡುವ ಸಲುವಾಗಿ ತಮ್ಮನ್ನು ಭಕ್ತರೆಂದು ವೈಭವೀಕರಿಸಿಕೊಂಡಿದ್ದಾರೆ.ಇವರು ಜೀವನ ಸಾಗಿಸಲು ವೈರಾಗತ್ವ ಸ್ವೀಕರಿಸಿದ್ದಾರೆಯೆ ಹೊರತು ಸಾಂಸಾರಿಕ ಬದುಕಿನಿಂದ ಬೇಸತ್ತು ವಿರಾಗಿಯಾಗಿ ಭಕ್ತರಾದವರಲ್ಲ. ಇಂತಹವರಿಗೂ ಭಕ್ತಿಗೂ ಬಹಳಷ್ಟು ಅಂತರವಿದೆ. ಈ ಅಳುಕು ಸ್ವಭಾವದವರನ್ನು ಕಂಡು ಪುರಂದರರು 'ನಗೆಯು ಬರುತಿದೆ ಎನಗೆ ನಗೆಯು ಬರುತಿದೆ' ಎಂದು ಅಣಕಿಸಿದ್ದಾರೆ.

ಹಿಂದೆ ಜನ ತಮಗೆ ಇಷ್ಟವಾದ, ಸುಲಭವಾಗಿ ಮಾಡಲು ಬರುತ್ತಿದ್ದ ಕೆಲಸಗಳನ್ನು ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಆ ವೃತ್ತಿಗಳನ್ನು ಜಾತಿಗಳನ್ನಾಗಿ ಪರಿವರ್ತಿಸಿ, ಕೆಲ ವೃತ್ತಿಗಳನ್ನು ನಿರ್ವಹಿಸುತ್ತಿದ್ದವರನ್ನು ಮೇಲು ಜಾತಿಯವರೆಂದು, ಮತ್ತೆ ಕೆಲವು ಕಸುಬುಗಳನ್ನು ಮಾಡುತ್ತಿದ್ದವರನ್ನು ಕೀಳು ಜಾತಿಯವರೆಂದು ನಿರ್ಧರಿಸಿ, ಸಮಾಜದಲ್ಲಿ ಒಡೆದು ಆಳುವ ನೀತಿ ಆರಂಭಿಸಿದರು.ಇದನ್ನು ಮನಗಂಡ ಕೀರ್ತನಾ ಕಾರರು ಜಾತಿ ವ್ಯವಸ್ಥೆಯ ವಿರುದ್ಧ ಸಿಡಿದೇಳುವರು. ಜಾತಿ ವ್ಯವಸ್ಥೆ ಕೇವಲ ಒಬ್ಬರ ಪ್ರಶ್ನೆಯಾಗಿರದೆ ತುಳಿತಕ್ಕೆ ಬಲಿಯಾದ ಸಮೂಹದ ಪ್ರಶ್ನೆ.ಕನಕ ದಾಸರು ವಚನಕಾರರಂತೆ ಪರಂಪರಾಗತವಾಗಿ ಬಂದ ಅಸಮಾನತೆ, ಅಹಂಕಾರ, ಡಾಂಭಿಕತೆಗಳಿಗೆ ಪ್ರತಿರೋಧ ಒಡ್ಡುವುದರ ಮೂಲಕ ತಳ ಸಮುದಾಯಗಳ ದನಿಯಾಗಿ ನಿಲ್ಲುತ್ತಾರೆ.

"ಕುಲ ಕುಲ ಕುಲವೆನ್ನುತಿಹರು

ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ

ಕೆಸರೊಳು ತಾವರೆ ಪುಟ್ಟಲು ಅದು ತಂದು

ಬಿಸಜನಾಭನಿಗರ್ಪಿಸಲಿಲ್ಲವೆ

ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವ

ವಸುಧೆಯೊಳಗೆ ಭೂಸುರರುಣಲಿಲ್ಲವೆ"...4

ಪ್ರಸ್ತುತ ಕೀರ್ತನೆಯಲ್ಲಿ ಸಾಮಾಜಿಕ ಸಮಾನತೆಯ ಚಿತ್ರಣವನ್ನು ಕಟ್ಟಿಕೊಡುವುದರ ಮೂಲಕ ಸಮಾಜದಲ್ಲಿ ಭೈರವ ನಾಟ್ಯವಾಡುತ್ತಿದ್ದ ಜಾತಿ ವ್ಯವಸ್ಥೆಯನ್ನು ಬುಡಮಟ್ಟ ಕೀಳಲು ಹೊರಟು ಪರಿಸರವನ್ನು ಶುದ್ಧಿಗೊಳಸುವ ಪ್ರಯತ್ನ ಮಾಡುತ್ತಾರೆ. ಕೆಸರಲ್ಲಿ ಹುಟ್ಟಿದ ಹೂವನ್ನು ದೇವರಿಗೆ ಅರ್ಪಿಸುವರು,ಹಸುವಿನ ಮಾಂಸದಿಂದ ಬಂದ ಹಾಲನ್ನು ಎಲ್ಲಾ ಜಾತಿಯವರು ಬಳಸುತ್ತಾರೆ.ಮೃಗಗಳಿಂದ ಜನಿಸಿದ ಕಸ್ತೂರಿಯನ್ನು ಉನ್ನತ ಕುಲದವರು ಹಚ್ಚಿಕೊಳ್ಳುತ್ತಾರೆ.ಆದರೆ ಪ್ರಾಣಿಗಳಿಗಿರುವ ಮೌಲ್ಯ ಕೆಳಜಾತಿಯವರಿಗೇಕಿಲ್ಲ. ಎಲ್ಲರು ಮನುಷ್ಯರಲ್ಲವೇ ? ಮನುಷ್ಯರಲ್ಲಿಯೆ ಅಸಮಾನತೆ ಸಾಧುವೇ ಎಂದು ಪ್ರಶ್ನಿಸುವರು. ಮೇಲಿನ ಕೀರ್ತನೆಗೆ ಸಂವಾದಿಯಾಗಿ

'ಕುಲಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನ್ನೇನಾದರು ಬಲ್ಲಿರಾ_ ಕೀರ್ತನೆಯಲ್ಲಿಯೂ ಸಹ ವೃತ್ತಿಯಾಧಾರಿತ ಜಾತಿಗಳಿಗೆ ಮೇಲು-ಕೀಳಿನ ಪಟ್ಟ ಕಟ್ಟಿ ಪ್ರಬಲ ವರ್ಗ ದುರ್ಬಲ ವರ್ಗವನ್ನು ಅತ್ಯಂತ ನಿಕೃಷ್ಟವಾಗಿ ಕಾಣುತ್ತಿದ್ದನ್ನು ವಿರೋಧಿಸುವುದರ ಮೂಲಕ ಮನುಷ್ಯರೆಲ್ಲರ ಜನನ ಒಂದೇ ರೀತಿಯಲ್ಲಿ ಆಗುತ್ತದೆ. ಜನ್ಮಧರಿಸಿದ ನಂತರದ ತಾರತಮ್ಯವನ್ನು ಖಂಡಿಸುತ್ತಾ ವರ್ಗ ಸಾಮರಸ್ಯವನ್ನು ಮೊಳಗಿಸಿದರು.

ಜಾತಿಯತೆಯ ಮನೋಭಾವನೆಯನ್ನು ಬುಡಸಮೇತ ಕಿತ್ತೊಗೆದು ಸಮಾಜವನ್ನು ಜಾತಿ ಮುಕ್ತವಾಗಿಸಬೇಕೆಂದು ಪುರಂದರದಾಸರು ಪಣತೊಟ್ಟಿದ್ದರು. ಜಾತಿವ್ಯವಸ್ಥೆ ಸಮಾಜದ ಪ್ರಗತಿಗೆ ಮಾರಕವೆಂಬುದನ್ನು ಅರಿತಿದ್ದರು. ಒಬ್ಬಮನುಷ್ಯ ಮತ್ತೊಬ್ಬನನ್ನು ನೋಡುವ ನಿಕೃಷ್ಟ ರೀತಿಯನ್ನು ಕಂಡ ಪುರಂದರದಾಸರು

"ಹೊಲೆಯ ಹೊರಗಿಹನೆ ಊರೊಳಗಿಲ್ಲವೆ

ಹರಿಯ ಭಕ್ತರು ಪೇಳ ಮತ್ತಿದನು"

ಹೊಲೆಯ, ಪುರೋಹಿತ ಇನ್ನಿತರ ಜಾತಿ ಭೇದ ಭಾವವನ್ನು ಮಾಡಬೇಕಾಗಿರುವುದು ಸ್ಥಳ, ವೃತ್ತಿಯಿಂದಲ್ಲ.ಹೊಲೆತನ ವ್ಯಕ್ತಿಯ ನಡೆ-ನುಡಿ,ಆಚಾರ,ಅನಾಚಾರಗಳಿಂದ ಬರುತ್ತದೆಯೇ ಹೊರತು ಹುಟ್ಟಿನಿಂದಲ್ಲ.ಮನಸ್ಸಿನಲ್ಲಿ ಕಲ್ಮಶಗಳನ್ನು ತುಂಬಿಟ್ಟು ಕೊಂಡು ,ವಿನಾ ಕಾರಣ ಬೇರೆಯವರಿಗೆ ಕೆಡುಕನ್ನು ಬಯಸುವ,ಇಬ್ಬರಾಡುವ ಮಾತನ್ನು ಕದ್ದು ಕೇಳಿಸಿಕೊಂಡು ದ್ರೋಹ ಬಗೆಯುವ ನೀಚ ವ್ಯಕ್ತಿಯೆ ನಿಜವಾದ ಹೊಲೆಯನೆಂದು ಜಾತಿಗೆ ಸಂಬಂಧಿಸಿದ ಹೊಸ ವ್ಯಾಖ್ಯಾಯನವನ್ನು ನೀಡುವರು.

ಸಮಾಜದಲ್ಲಿ ಸಾಮಾಜಿಕ ಸುಧಾರಣೆ ತರುವಲ್ಲಿ ಕೀರ್ತನಾ ಕಾರರ ಪಾತ್ರ ಅಪಾರ.ಅವರು ಜನರಿಗೆ ಅರಿವು ಮೂಡಿಸಲು ಸಭೆ, ಸಮಾರಂಭ, ಭಾಷಣ, ಉಪನ್ಯಾಸ ಇತ್ಯಾದಿ ದಾರಿಗಳಿಗೆ ಬದಲಾಗಿ ತಮ್ಮಲ್ಲಿ ಅಡಗಿದ್ದ ನಾದೋಪಾಸನೆಯ ಮಾರ್ಗವನ್ನು ಅನುಸರಿಸಿದರು. ಸರಳ ಶೈಲಿಯಿಂದ ಸಂಗೀತದ ಮಾಧುರ್ಯವನ್ನು ವೈವಿಧ್ಯ ವಸ್ತುವಿನಿಂದ ಜನಮನವನ್ನು ಸೂರೆಗೊಂಡರು. ಜನರಿಗೆ ನೀತಿ ಬೊಧೆಮಾಡುವುದರ ಮೂಲಕ ಸಮಾಜದ ಓರೆ-ಕೋರೆಗಳನ್ನು ತಿದ್ದಿ ನಯ ನಾಜೂಕುಗೊಳಿಸಿದರು. ನೀತಿ ಬೋಧನೆಯ ಮೂಲಕ ಜನಮಾನಸದಲ್ಲಿ ಅಡಗಿದ್ದ ಅನಿಷ್ಟವನ್ನು ತಡೆಗಟ್ಟಿ ಜನರ ಮನಸ್ಸನ್ನು ಪರಿವರ್ತಿಸಲು ಪ್ರಯತ್ನಿಸಿದರು. ಅವರ ವೈಚಾರಿಕ ಮನೋಭಾವ, ಸಾಮಾಜಿಕ ಪ್ರಜ್ಞೆ, ಸಾಮಾಜಿಕ ಕಳಕಳ ಮೊದಲಾದ ಅಂಶಗಳ ಮೂಲಕ ಸಮಾಜವನ್ನು ಬದಲಾಯಿಸಿದ ಹಿರಿಮೆ ಕೀರ್ತನಾಕಾರರದ್ದು.

**ಅಡಿ ಟಿಪ್ಪಣಿಗಳು:**

1. ಜನಪ್ರಿಯ ಕನಕ ಸಂಪುಟ –(ಸಂ) ದೇ.ಜವರೇಗೌಡ,ಎಲ್.ಎಸ್.ಶೇಷಗಿರಿರಾವ್, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ಮು 1989, ಪುಟ-32

2. ಅದೇ ಪುಟ–35

3. ಪುರಂದರ ದಾಸರ ಸಾಹಿತ್ಯ ದರ್ಶನ ಸಂ.1 , ಜೀವನ ದರ್ಶನ (ಸಂ) ಸಾ.ಕೃ.ರಾಮಚಂದ್ರರಾವ್ , ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.ಪುಟ–174

4. ಜನಪ್ರಿಯ ಕನಕ ಸಂಪುಟ –(ಸಂ) ದೇ.ಜವರೇಗೌಡ,ಎಲ್.ಎಸ್.ಶೇಷಗಿರಿರಾವ್, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ಮು 1989, ಪುಟ–17

ಆಕರ ಗ್ರಂಥಗಳು :

1. ಕನಕ ದಾಸರ ಪ್ರಸಿದ್ಧ ಕೀರ್ತನೆಗಳು – (ಸಂ) ಮಾನಸ, ತನುಮನ ಪ್ರಕಾಶನ, ರಾಮಕೃಷ್ಣ ನಗರ, ಮೈಸೂರು

2. ಜನಪ್ರಿಯ ಕನಕ ಸಂಪುಟ (ಸಂ) ದೇ.ಜವರೇಗೌಡ, ಶೇಷಗಿರಿರಾವ್, ದೇವೇಂದ್ರ ಕುಮಾರ ಹಕಾರಿ,ಎಚ್.ಜೆ.ಲಕ್ಕಪ್ಪ ಗೌಡ–ಕನ್ನಡ ಸಂಸ್ಕೃತಿ ನಿರ್ದೇಶನಾಲಯ,ಬೆಂಗಳೂರು.

3. ದಾಸ ಸಾಹಿತ್ಯ ಸರ್ವಸ್ವ ಸಂಪುಟ 7 , ಶ್ರೀ ಪುರಂದರ ದಾಸರ ಕೃತಿಗಳು ಭಾಗ–3, (ಸಂ) ಶ್ರೀ ಪಿ.ಆರ್.ಆನಂದತೀರ್ಥಾಚಾರ್, ಡಾ.ಟಿ.ಎನ್.ನಾಗರತ್ನ

4. ಪುರಂದರ ದಾಸರ ಸಾಹಿತ್ಯ ದರ್ಶನ ಸಂ.1, ಜೀವನ ದರ್ಶನ (ಸಂ) ಸಾ.ಕೃ.ರಾಮಚಂದ್ರರಾವ್ , ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.ಮು.1985